ದಿ.04.12.2025 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಎನ್.ಎಲ್.ಹೆಚ್ ವಕೀಲರಿಂದ.**

ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಹಾಜರು ಪಡಿಸಿದ್ದು, ಅದರಲ್ಲಿರುವ ಸಂಗತಿಗಳೆಲ್ಲಾ ಸತ್ಯವಿದ್ದು, ಅದನ್ನು ನಾನೇ ಹೇಳಿ ಬರೆಸಿದ್ದೇನೆ ಹಾಗೂ ಪ್ರಮಾಣ ಪತ್ರಕ್ಕೆ ನಾನೇ ಸಹಿ ಮಾಡಿರುತ್ತೇನೆ.

**ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

*(ರಾಘವೇಂದ್ರ. ಡಿ.)*
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಭದ್ರಾವತಿ

ದಿ.20.08.2025 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರಿದ ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಎನ್.ಎಲ್.ಹೆಚ್ ವಕೀಲರಿಂದ.**

1. ಉಪತಹಶೀಲ್ದಾರ್ ಹೊಳೆಹೊನ್ನುರು ಇವರು ನೀಡಿರುವ ಗಣಕೀಕೃತ ವಂಶವೃಕ್ಷ ಹಾಜರು ಪಡಿಸಿದ್ದು ಅದನ್ನು ತಕರಾರಿಗೆ ಒಳಪಟ್ಟು ನಿಪಿ-16 ಎಂದು ಗುರುತಿಸಲಾಯಿತು.

**ಮುಂದುವರಿಂದ ಮುಖ್ಯವಿಚಾರಣೆಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

*(ರಾಘವೇಂದ್ರ. ಡಿ.)*
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಭದ್ರಾವತಿ

ದಿ.15.12.2025 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಸ್.ಕೆ ವಕೀಲರಿಂದ.**

**1.** ಸರ್ವೆ ನಂ. 93 ರ ಬ್ಲಾಕ್ ನಂ. 01 ರಲ್ಲಿ ನನಗೆ ಸೇರಿದ 05 ಎಕರೆ 10 ಗುಂಟೆ ಜಮೀನು ಇರುತ್ತದೆ. ಬಗರ್ ಹುಕ್ಕುಂ ನಲ್ಲಿ ಸದರಿ ಜಮೀನು ನಮಗೆ ಬಂದಿರುತ್ತದೆ. ಸರ್ವೆ ನಂ. 93 ಮತ್ತು ಸರ್ವೆ ನಂ. 93/2 ರಲ್ಲಿ ಒಟ್ಟು ಎಷ್ಟು ವಿಸ್ತೀರ್ಣದ ಜಮೀನುಗಳು ಇವೆ ಎಂದು ನನಗೆ ಗೊತ್ತಿಲ್ಲ. ನನ್ನ ಮುಖ್ಯವಿಚಾರಣೆಯಲ್ಲಿ ಸರ್ವೆ ನಂ. 93 ರಲ್ಲಿ 10 ಎಕರೆ 20 ಗುಂಟೆ ಜಮೀನು ಇರುತ್ತದೆ ಎಂದು ಹೇಳಿರುತ್ತೇನೆ. ನನಗೆ ಸೇರಿದ 05 ಎಕರೆ 10 ಗುಂಟೆ ಜಮೀನು 1975 ರಲ್ಲಿ ಮಂಜೂರಾಗಿರುತ್ತದೆ. ಸರ್ವೆ ನಂ.93/2 ಅನ್ನು ಯಾರು ಖರೀದಿ ಮಾಡಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ. ಸರ್ವೆ ನಂ. 93 ರಲ್ಲಿ ನಾನು ಒಂದೂವರೆ ಎಕರೆ ಜಮೀನನ್ನು ನಾಗರಾಜ್ ರವರಿಂದ ಖರೀದಿ ಮಾಡಿರುತ್ತೇನೆ. ಒಂದು ಆಸ್ತಿಯನ್ನು ಖರೀದಿ ಮಾಡಬೇಕಾದರೆ ಅದು ಅವರಿಗೆ ಯಾವಾ ರೀತಿ ಮಾಲೀಕತ್ವದಿಂದ ಬಂದಿರುತ್ತೆ ಎಂದು ತಿಳಿದುಕೊಂಡು ಖರೀದಿ ಮಾಡಬೇಕೆಂದರೆ ಸರಿ. ನಾಗರಾಜ್ ರವರ ಒಟ್ಟು ಕುಟುಂಬದಲ್ಲಿದ್ದಾಗ ನಾನು ಒಂದೂವರೆ ಎಕರೆ ಜಮೀನನ್ನು ಖರೀದಿ ಮಾಡಿರುತ್ತೇನೆ. ನಾನು ಖರೀದಿ ಮಾಡಿರುವ ಒಂದೂವರೆ ಎಕರೆ ಜಮೀನಿಗೆ ನಾಗರಾಜ್ ರವರ ಕುಟುಂಬದವರಿಗೂ ಸಹ ಹಕ್ಕಿರುತ್ತದೆ ಎಂದರೆ ಸರಿ. ನಾಗರಾಜ್ ರವರ ಅಜ್ಜ ಯಲ್ಲಪ್ಪನವರಿಗೆ ಮೂರು ಜನ ಮಕ್ಕಳು. ಯಲ್ಲಪ್ಪನ ಗಂಡು ಮತ್ತು ಹೆಣ್ಣುಮಕ್ಕಳಿಗೆ ಹಕ್ಕಿರುವ ಆಸ್ತಿಯನ್ನು ನಾನು ಖರೀದಿ ಮಾಡಿರುತ್ತೇನೆ ಎಂದರೆ ಸರಿ. ಯಲ್ಲಪ್ಪನ ಗಂಡು ಮಕ್ಕಳೆಲ್ಲರೂ ನನಗೆ ಕ್ರಯಪತ್ರವನ್ನು ಬರೆದುಕೊಟ್ಟಿರುತ್ತಾರೆ. ಯಲ್ಲಪ್ಪನ ಮೂರು ಗಂಡು ಮಕ್ಕಳು ರಾಜಪ್ಪ, ಅಣ್ಣಪ್ಪ ಮತ್ತು ರಾಮಣ್ಣ. ನನ್ನ ಕ್ರಯಪತ್ರಕ್ಕೆ ಈ ಕೇಸಿನ ವಾದಿಯೇ ಚಕ್ಕುಬಂಧಿಯನ್ನು ಹೇಳಿ ಬರೆಸಿರುತ್ತಾರೆ. ನನ್ನ ಕ್ರಯಪತ್ರದಲ್ಲಿ ಪೂರ್ವಕ್ಕೆ ಪ್ರತಿವಾದಿ ರಾಜರಾವ್ ರವರ ಜಮೀನು ಎಂದು ಬರೆದಿರುತ್ತದೆ ಎಂದರೆ ಸರಿ. ಕ್ರಯಪತ್ರಕ್ಕೆ ಪ್ರತಿವಾದಿ ರಾಜರಾವ್ ರವರು ಸಹಿ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿಗೆ ದಿಃ 23-06-12010 ರ ಕ್ರಯಪತ್ರದ ಛಾಯಾಪ್ರತಿಯನ್ನು ತೋರಿಸಲಾಗಿ ಸಾಕ್ಷಿಯು ಆ ಕ್ರಯಪತ್ರ ನನಗೆ ಸಂಬಂಧಪಟ್ಟಿದ್ದು ಎಂದು ಒಪ್ಪಿಕೊಂಡಿರುತ್ತಾರೆ. ಸಾಕ್ಷಿಯ ಒಪ್ಪಿಕೊಂಡಂತಹ ಕ್ರಯಪತ್ರವನ್ನು **ನಿಡಿ-01** ಎಂದು ಗುರುತಿಸಲಾಯಿತು. ರಾಜ್‌ರಾವ್ ರವರ ಅಜ್ಜನನ್ನು ನಾನು ನೋಡಿರುವುದಿಲ್ಲ. ರಾಜರಾವ್‌ರವರ ತಂದೆ ರಾಮಚಂದ್ರರಾವ್ ಯಾವಾಗ ಮೃತಪಟ್ಟಿರುತ್ತಾರೆಂದು ನನಗೆ ಗೊತ್ತಿಲ್ಲ. ರಾಮಚಂದ್ರರಾವ್ ರವರ ತಂದೆ ಜಮೀನನ್ನು ಯಾವಾಗ ಖರೀದಿ ಮಾಡಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ. ಸರ್ವೆ ನಂ. 93/2 ರಲ್ಲಿ ಎಷ್ಟು ಎಕರೆ ಜಮೀನಿನ ಪಹಣಿಗಳು ರಾಜರಾವ್ ರವರ ಹೆಸರಿಗೆ ಇರುತ್ತವೆ ಎಂದು ನನಗೆ ಗೊತ್ತಿಲ್ಲ. ರಾಜರಾವ್ ರವರ ಅಣ್ಣ ತಮ್ಮ ಎಷ್ಟು ಜನರಿದ್ದಾರೆಂದು ನನಗೆ ಗೊತ್ತಿಲ್ಲ. ರಾಜರಾವ್ ರವರ ಜಮೀನಿನ ಪೂರ್ವ ಭಾಗಕ್ಕೆ ಊರು ಬರುತ್ತದೆ ಎಂದರೆ ಸರಿ. ಪಶ್ಚಿಮ ಭಾಗಕ್ಕೆ ನನ್ನ ಮತ್ತು ನನ್ನ ಅಣ್ಣ ತಮ್ಮಂದಿರ ಜಮೀನುಗಳು ಬರುತ್ತವೆ ಎಂದರೆ ಸರಿ. ನಾವು ಖರೀದಿ ಮಾಡಿದ ಆಸ್ತಿಯನ್ನು ನಾವೆಲ್ಲರೂ 9 ವರೆ ಗುಂಟೆಯಂತೆ ಹಂಚಿಕೆ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಪ್ರತಿವಾದಿ ಜಹಮೀನಿನ ಉತ್ತರಕ್ಕೆ ನಾಗೇಂದ್ರಪ್ಪ ಬಿನ್ ಹಾಲಪ್ಪನವರ ಜಮೀನು, ದಕ್ಷಿಣಕ್ಕೆ

ರಾಮಪ್ಪ ಬಿನ್ ಸಾಲಪ್ಪನವರ ಜಮೀನುಗಳು ಇರುತ್ತವೆ ಎಂದರೆ ಸರಿ. ಸರ್ವೆ ನಂ. 93/1 ರಲ್ಲಿ ನಾಗರಾಜ್ ರವರ ಕುಟುಂಬದ ಆಸ್ತಿಗಳನ್ನು ಭಾಗ ಮಾಡಿಕೊಂಡು ಬೇರೆಬೇರೆಯವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ನಾಗರಾಜ್ ರವರಿಂದ ಖರೀದಿ ಮಾಡಿ ಜಮೀನುಗಳೆಲ್ಲವೂ ಖಾತೆ ಬದಲಾವಣೆಯಾಗಿ ನಮ್ಮ ಹೆಸರಿಗೆ ಬರುತ್ತಿರುತ್ತದೆ ಎಂದರೆ ಸರಿ. ರಾಜ್ ರಾಮ್ ರವರ ತಂದೆ ಯಾವಾಗ ಮೃತಪಟ್ಟಿರುತ್ತಾರೆಂದು ನನಗೆ ಗೊತ್ತಿಲ್ಲ. ನಾನು ರಾಜರಾವ್ ರವರ ತಂದೆಯನ್ನು ನೋಡಿರುವುದಿಲ್ಲ ಮತ್ತು ಅವರ ವ್ಯವಹಾರದಲ್ಲಿ ಭಾಗಿಯಾಗಿರುವುದಿಲ್ಲ. ರಾಜರಾವ್ ರವರ ತಂದೆ ದೊಡ್ಡ ರಾಮಚಂದ್ರರವರು 1954 ರಲ್ಲಿ ಮೃತಪಟ್ಟಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ದೊಡ್ಡರಾಮಚಂದ್ರರವರು ಮೃತರಾದ ನಂತರ ಅವರಿಗೆ ಸೇರಿದ ಆಸ್ತಿಗಳು ರಾಜರಾವ್ ರವರ ಹೆಸರಿಗೆ ಮೈನರ್ ಗಾರ್ಡಿಯನ್ ಆಗಿ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ರಾಜರಾವ್ ರವರ ಹೆಸರಿಗೆ ಎಷ್ಟು ವರ್ಷದಿಂದ ಪಹಣಿ ಬರುತ್ತಿದೆ ಎಂದು ನನಗೆ ಗೊತ್ತಿಲ್ಲ. ರಾಜರಾವ್ ರವರುಎಷ್ಟು ವರ್ಷಗಳಿಂದಸಾಗುವಳಿ ಮಾಡಿಕೊಡು ಬರುತ್ತಿದ್ದಾರೆ ಎಂದು ನನಗೆ ಗೊತ್ತಿಲ್ಲ.

2. 1932 ರಲ್ಲಿ ಯಾರ ಹೆಸರಿಗೆ ಕ್ರಯಪತ್ರ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. 93/2 ಕ್ಕೆ ಸಂಬಂಧಪಟ್ಟಂತೆ ಏನೇನು ದಾಖಲಾಗಿದೆ ಎಂದು ನನಗೆ ಗೊತ್ತಿಲ್ಲ. ವಾದಿ ನಾಗರಾಜ್ ರವರುಗ್ರಾಮ ಪಂಚಾಯ್ತಿಯ ಅಧ್ಯಕ್ಷರು ಮತ್ತು ಉಪಾಧ್ಯಕ್ಷರಾಗಿ ಕೆಲಸ ಮಾಡಿರುತ್ತಾರೆ ಎಂದರೆ ಸರಿ. ನಾನು ಮತ್ತು ನಾಗರಾಜ್ ರವರು ಬಹಳ ವರ್ಷಗಳಿಂದ ಸ್ನೇಹಿತರು ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ನನ್ನ ವಯಸ್ಸು 72 ಎಂದು ತೋರಿಸಿರುತ್ತೇನೆ. ನನ್ನ ವಯಸ್ಸು ತೋರಿಸಲು ಶಾಲಾ ದಾಖಲೆ ಇರುತ್ತದೆ. ನಿಡಿ-1 ನನ್ನ ಕ್ರಯಪತ್ರದಲ್ಲಿ ನನ್ನ ವಯಸ್ಸು 50 ವರ್ಷ ಎಂದು ಬರೆಯಲಾಗಿದೆ ಎಂದರೆ ಸಾಕ್ಷಿಯು ಯಾರೋ ಬರೆಸಿರುತ್ತಾರೆ ಎಂದು ಹೇಳುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ಸಂಗತಿಗಳುಸುಳ್ಳು ಇರುತ್ತದೆ ಎಂದರೆ ಸರಿಯಲ್ಲ. ವಾದಿ ನನ್ನ ಸ್ನೇಹಿತರಾದ್ದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾಸ್ವತ್ತನ್ನು ಪ್ರತಿವಾದಿಯ ಅಜ್ಜ ಖರೀದಿ ಮಾಡಿದ್ದು , ಆಗಿನ ಕಾಲದಿಂದಲೂಅವರ ಕುಟುಂಬದವರೇ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ದಾವಾಸ್ವತ್ತಿನಲ್ಲಿ ವಾದಿಯು ಸ್ವಾಧೀನ ಇರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ದಾವಾಸ್ವತ್ತಿನ ಮೇಲೆ ಯಾವುದೇ ಮಾಲೀಕತ್ವ ಮತ್ತು ಸ್ವಾಧೀನ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

*(ರಾಘವೇಂದ್ರ. ಡಿ.)*
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಭದ್ರಾವತಿ